9-12-2024

(3)

3-0-154

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹಣಮಂತ ರುದ್ರಪ್ಪ ನಿರಾಣಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಹೇಳಿಕೆ

**ವಿಷಯ:** ಕೃಷ್ಣಾ ಮೇಲ್ದಂಡೆ ಯೋಜನೆಯು ಸರ್ಕಾರದ ಮಹಾತ್ವಾಕಾಂಕ್ಷೆಯ ನೀರಾವರಿ ಯೋಜನೆಯಾಗಿದ್ದು, ಸದರಿ ಯೋಜನೆಯು ಹಂತ-3ರ ಅನುಷ್ಠಾನದಲ್ಲಿ ಮುಳುಗಡೆ ಹೊಂದುವ ಜಮೀನನ್ನು ಎಫ್.ಆರ್ ಎಲ್.519.6 ರಿಂದ 522. ಮೀ. ರವರೆಗೆ ಮತ್ತು ಎಫ್.ಆರ್.ಎಲ್ 522 ಮೀ ದಿಂದ 524.246 ಮೀ ವರೆಗೆ 2 ಹಂತದಲ್ಲಿ ಭೂಸ್ವಾಧೀನಕ್ಕೆ ಒಳಪಡಿಸುವುದರಿಂದ ಆ ಭಾಗದಲ್ಲಿ ಭೂಮಿ ಕಳೆದುಕೊಂಡ ಸಂತ್ರಸ್ಥರಿಗೆ/ ರೈತ ಕುಟುಂಬಗಳಿಗೆ/ಕೂಲಿ ಕಾರ್ಮಿಕರಿಗೆ ಬಹಳ ತೊಂದರೆಯಾಗುತ್ತಿದೆ.

ದಿನಾಂಕ:26.12.2023ರಂದು ಕೆ.ಬಿ.ಜೆ.ಎನ್.ಎಲ್. ನಿಗಮದ ಮಂಡಳಿ ಸಭೆಯ 140ನೇ ನಿರ್ದೇಶಕರ ಮಂಡಳಿಯ ಸಭೆಯ ನಡವಳಿಯ ತೀರ್ಮಾನದಿಂದಾಗಿ ಆ ಭಾಗದ ಸಂತ್ರಸ್ಥ ರೈತರು ಭಯ ಭೀತರಾಗಿರುವುದು (ಕಂಗಾಲಾಗಿರುವುದು) ನೋವಿನ ಸಂಗತಿಯಾಗಿದೆ.

ಸದರಿ ನಿರ್ದೇಶಕರ ಮಂಡಳಿಯ ನಡವಳಿಯನ್ನು ಪುನರ್ ಪರಿಶೀಲಿಸಿ, ಏಕಕಾಲದಲ್ಲಿ/ಒಂದೇ ಹಂತದಲ್ಲಿ ಸ್ವಾಧೀನಪಡಿಸಿಕೊಂಡು ಎಫ್.ಆರ್.ಎಲ್ 524.256 ಮೀ ಗೆ ಪರಿಹಾರ ವಿತರಿಸಬೇಕು ಎಂಬುದು ಆ ಭಾಗದ ಸಂತ್ರಸ್ಥ ರೈತರ ಬೇಡಿಕೆಯಾಗಿದೆ. ಎರಡು ಹಂತದ ಭೂ-ಸ್ವಾಧೀನ ಪ್ರಕ್ರಿಯೆಯನ್ನು ಕೈಬಿಟ್ಟು ಏಕಕಾಲದಲ್ಲಿ ಎಫ್ಆರ್.ಎಲ್ 524.256 ಮೀ ಗೆ ಎತ್ತರಿಸಿ ಪರಿಹಾರ ಧನವನ್ನು ವಿತರಿಸಬೇಕೆಂದು ಹಾಗೂ ಮುಳುಗಡೆ ಹೊಂದಲಿರುವ ಸುಮಾರು 20 ಗ್ರಾಮಗಳಿಗೆ ಪರಿಹಾರ ಧನ ವಿತರಿಸಿ ಪುನರ್ ವಸತಿ ಕೇಂದ್ರಗಳನ್ನು ನಿರ್ಮಿಸಬೇಕೆಂದು ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯ ಸಂತ್ರಸ್ತ ಕುಟುಂಬಗಳು ಹೋರಾಟವನ್ನು ಮಾಡುತ್ತಿರುವ ವಿಷಯವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತಾ, ದಿನಾಂಕ 03.12.2024 ರಿಂದ ಬಾಗಲಕೋಟೆ ಜಿಲ್ಲಾಧಿಕಾರಿಗಳ ಕಛೇರಿ ಮುಂಬಾಗದಲ್ಲಿ ಪಕ್ಷಾತೀತವಾಗಿ ಅಹೋರಾತ್ರಿ ಧರಣಿ ಮತ್ತು ಸರದಿ ಉಪವಾಸ ಸತ್ಯಾಗ್ರಹವನ್ನು ಆರಂಬಿಸಿದ್ದಾರೆ.

ತಮ್ಮ ಮನೆ-ಮಠ ಆಸ್ತಿ ಅಂತಸ್ತುಗಳನ್ನು ಕಳೆದುಕೊಂಡು ದೇಶಕ್ಕಾಗಿ/ದೇಶದ ಹಿತಕ್ಕಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿದ ಶಿವ ಸ್ವರೂಪಿಗಳಾದ ರೈತ ಕುಟುಂಬಗಳ ನೆರವಿಗೆ ಸರ್ಕಾರ ಮುಂದಾಗಬೇಕಿದೆ. ನಾಗರೀಕ ಸಮಾಜದಲ್ಲಿ ರೈತರ ಕಷ್ಟ ನಷ್ಟಗಳನ್ನು ಅರಿತು ಅವರ ಬೇಡಿಕೆಗಳನ್ನು ಅತೀ ಶೀಘ್ರದಲ್ಲಿ ಭೂ-ಸ್ವಾಧೀನ ಪಡಿಸಿಕೊಂಡು ಯೋಗ್ಯವಾದ ಭೂ ಪರಿಹಾರ ಧನವನ್ನು ಮತ್ತು ಎಫ್ಆರ್.ಎಲ್ 524.256 ಮೀ ಗೆ ಎತ್ತರಿಸಿ ಸುಮಾರು 130 ಟಿಎಂಸಿ ನೀರಿನ ಸದ್ಬಳಕೆ ಮಾಡಿಕೊಂಡು ಕೆಳಬಾಗದಲ್ಲಿರುವ ಉತ್ತರ ಕರ್ನಾಟಕ ಭಾಗದ 07 ಜಿಲ್ಲೆಗಳ 15 ಲಕ್ಷ ಎಕರೆ ಭೂಮಿಗೆ ನೀರನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರ (ನೀರಾವರಿ ಇಲಾಖೆಯು)ವು ಕಾರ್ಯನಿರ್ವಹಿಸಬೇಕೆಂದು ಸಮಗ್ರ ಉತ್ತರ ಕರ್ನಾಟಕ ಭಾಗದ ಸಂತ್ರಸ್ಥ ಕುಟುಂಬಗಳ ಪರವಾಗಿ ಮತ್ತೊಮ್ಮೆ ಸರ್ಕಾರವನ್ನು ಆಗ್ರಹಿಸಿಸುತ್ತಾ,

ಎಫ್ಆರ್.ಎಲ್ 524.256 ಮೀ ದಿಂದ 522 ಮೀ. ಗೆ ಎತ್ತರಿಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸರ್ಕಾರವು ಅಫಿಡವಿಟ್ ಸಲ್ಲಿಸುವ ಪ್ರಕ್ರಿಯೆಯು ಆರಂಭಿಸಿದೆ ಎಂದು ಸಾರ್ವಜನಿಕರ ವಲಯದಲ್ಲಿ ಸುದ್ದಿ ಹರಿದಾಡುತ್ತಿರುವುದು ನೋವಿನ ಸಂಗತಿಯಾಗಿದೆ, ಉತ್ತರ ಕರ್ನಾಟಕದ ಸಂತ್ರಸ್ತ ರೈತರಿಗೆ ಅನ್ಯಾಯವಾಗುವಂತಹ ಯಾವುದೇ ನಿರ್ಧಾರಗಳನ್ನು ಸರ್ಕಾರ ತೆಗೆದುಕೊಳ್ಳದೇ ರೈತರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಮತ್ತು ಈ ಕುರಿತು ಸರ್ಕಾರವು ತನ್ನ ಸ್ಪಷ್ಟ ನಿಲುವನ್ನು ಪ್ರಕಟಿಸಿ ಭೂ ಪರಿಹಾರ ಧನ, ಪುನರ್ ವಸತಿ ಕೇಂದ್ರಗಳನ್ನು ನಿರ್ಮಿಸುವುದು ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ತಮ್ಮ ಮೂಲಕ ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

*******

ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ-2 ರ ಅಂತಿಮ ತೀರ್ಪಿನಲ್ಲಿ ರಾಜ್ಯಕ್ಕೆ ಹಂಚಿಕೆಯಾದ ಒಟ್ಟಾರೆ 173 ಟಿ.ಎಂ.ಸಿ. (ನದಿ ಪಾತ್ರದಡಿ ನೈಸರ್ಗಿಕ ಹರಿವು 7 ಟಿ.ಎಂ.ಸಿ ಒಳಗೊಂಡು) ಪೈಕಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ಯೋಜನೆಗೆ 130 ಟಿ.ಎಂ.ಸಿ. ಹಂಚಿಕೆಯಾಗಿರುತ್ತದೆ. ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ-2 ಅಂತಿಮ ತೀರ್ಪು ಕೇಂದ್ರ ಸರ್ಕಾರದಿಂದ ಗೆಜೆಟ್ ಪ್ರಕಟಣೆ ಆಗಬೇಕಾಗಿರುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ಯೋಜನೆಗೆ ಹಂಚಿಕೆಯಾದ 130 ಟಿ.ಎಂ.ಸಿ. ನೀರಿನ ಬಳಕೆಗಾಗಿ ಆಲಮಟ್ಟಿ

ಜಲಾಶಯದ ನೀರಿನ ಸಂಗ್ರಹಣೆಯನ್ನು RL 519.60 Mt-RL 524.256 Mt. ವರೆಗೆ ಎತ್ತರಿಸುವುದು ಒಳಗೊಂಡಿರುತ್ತದೆ.

ಈ ಯೋಜನೆಯಡಿ 9 ಉಪ ಯೋಜನೆಗಳ ಅನುಷ್ಠಾನದೊಂದಿಗೆ ಉತ್ತರ ಕರ್ನಾಟಕದ ವಿಜಯಪೂರ, ಬಾಗಲಕೋಟೆ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಗದಗ ಜಿಲ್ಲೆಗಳಡಿ ಒಟ್ಟಾರೆ 5.94 ಲಕ್ಷ ಹೆಕ್ಟೇರ್ (14.67 ಲಕ್ಷ ಎಕರೆ) ಅಚ್ಚುಕಟ್ಟು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿರುತ್ತದೆ. ಸದರಿ ಯೋಜನೆಯ 9 ಉಪ ಯೋಜನೆಗಳಡಿ ಕೈಗೊಂಡಿರುವ ಏತ ನೀರಾವರಿಗಳ ಮುಖ್ಯ ಸ್ಥಾವರಗಳ ನಿರ್ಮಾಣ, ಮುಖ್ಯ ಕಾಲುವೆ / ಶಾಖಾ ಕಾಲುವೆ ಜಾಲದ ನಿರ್ಮಾಣ ಪ್ರಗತಿಯ ವಿವಿಧ ಹಂತದಲ್ಲಿವೆ.

ಒಟ್ಟಾರೆ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಯೋಜನೆ (ಭೂಸ್ವಾಧೀನ, ಪುನರ್‌ವಸತಿ & ಪುನರ್‌ನಿರ್ಮಾಣ ಒಳಗೊಂಡಂತೆ) ಅಂದಾಜು ರೂ.51,148.94 ಕೋಟಿ ಮೊತ್ತದಲ್ಲಿ ಇಲ್ಲಿಯವರೆಗೆ ರೂ.18,307.33 ಕೋಟಿ ವೆಚ್ಚವನ್ನು ಭರಿಸಲಾಗಿರುತ್ತದೆ.

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಡಿ ಆಲಮಟ್ಟಿ ಜಲಾಶಯದ ಸಂಗ್ರಹಣೆ ಮಟ್ಟ 519.60 ಮೀ ದಿಂದ 524.256 ಮೀ ವರೆಗೆ ಎತ್ತರಿಸುವುದರಿಂದ ಹಿನ್ನೀರಿನಲ್ಲಿ ಮುಳುಗಡೆ ಹೊಂದಲಿರುವ ಜಮೀನುಗಳ ಭೂಸ್ವಾಧೀನತೆ, ಮುಳುಗಡೆ ಹೊಂದಲಿರುವ 20 ಗ್ರಾಮಗಳ & ಬಾಗಲಕೋಟೆ ಪಟ್ಟಣ ಸೇರಿದಂತೆ ಪುನರ್‌ವಸತಿ ಹಾಗೂ ಕಾಲುವೆಗಳ ಜಾಲಗಳ ನಿರ್ಮಾಣಕ್ಕಾಗಿ ಒಟ್ಟಾರೆ 1.34 ಲಕ್ಷ ಎಕರೆ ಜಮೀನು ಹೊಸ ಭೂಸ್ವಾಧಿನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳುವುದಾಗಿರುತ್ತದೆ.

**ಹಂತ-3ರಡಿ ಮುಳುಗಡೆ ಹೊಂದಲಿರುವ ಜಮೀನುಗಳಿಗೆ ಭೂ ಪರಿಹಾರ ನೀಡುವ ಕುರಿತು:**

- ಆಲಮಟ್ಟಿ ಜಲಾಶಯದ ಸಂಗ್ರಹಣೆ ಮಟ್ಟ ಎತ್ತರಿಸುವುದರಿಂದ ಹಿನ್ನೀರಿನಲ್ಲಿ 188 ಗ್ರಾಮಗಳಿಗೆ ಸಂಬಂಧಿಸಿದಂತೆ, ಮುಳುಗಡೆ ಹೊಂದಲಿರುವ 75,563 ಎಕರೆ ಭೂಸ್ವಾಧೀನಕ್ಕೆ ಒಳಪಡಿಸಬೇಕಾಗಿದ್ದು, ಈ ಪೈಕಿ 2,543 ಎಕರೆ ಕ್ಷೇತ್ರದ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡು, ಹೊಸ ಭೂಸ್ವಾಧೀನ ಕಾಯ್ದೆ 2013ರನ್ವಯ ಜಮೀನುಗಳಿಗೆ ರೂ.491.00 ಕೋಟಿ ಭೂ ಪರಿಹಾರ ವಿತರಿಸಲಾಗಿದೆ.
- ದಿನಾಂಕ: 12.08.2022 ರಂದು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಡಿ ಭೂಸ್ವಾಧೀನಕ್ಕೆ ಒಳಪಡುವ ಜಮೀನುಗಳಿಗೆ ನ್ಯಾಯಬದ್ಧ ದರ ನಿಗದಿಪಡಿಸುವ ಕುರಿತು ಸಚಿವ ಸಂಪುಟದ ಉಪ ಸಮಿತಿ ಸಭೆಯು ಜರುಗಿರುತ್ತದೆ ಸದರಿ ಸಭೆಯಲ್ಲಿ ಹಿನ್ನೀರಿನಲ್ಲಿ ಮುಳುಗಡೆ ಹೊಂದಲಿರುವ (ಅಂದಾಜು 75,563 ಎಕರೆ) ಜಮೀನು ಕ್ಷೇತ್ರವನ್ನು ಏಕಕಾಲಕ್ಕೆ ಭೂಸ್ವಾಧೀನಕ್ಕೆ ಒಳಪಡಿಸುವ ಬದಲಾಗಿ 02 ಹಂತದಲ್ಲಿ ಅಂದರೆ, 1ನೇ ಹಂತದಲ್ಲಿ ಆರ್.ಎಲ್ 519.60 ಮೀ. ರಿಂದ 522.00 ಮೀ. & 2ನೇ ಹಂತದಲ್ಲಿ ಆರ್.ಎಲ್.522.00 ಮೀ. ರಿಂದ 524.256ಮೀ. ವರೆಗೆ ಭೂಸ್ವಾಧೀನಕ್ಕೆ ಒಳಪಡಿಸಲು ತೀರ್ಮಾನಿಸಿರುತ್ತದೆ. ಸದರಿ ಸಮಿತಿಯ ನಡವಳಿಯು ದಿನಾಂಕ:26.12.2023ರಂದು ಜರುಗಿದ ಕೃಷ್ಣಾ ಭಾಗ್ಯ ಜಲ ನಿಗಮದ ಮಂಡಳಿಯ 140ನೇ ಸಭೆಯಲ್ಲಿ ಚರ್ಚಿಸಲ್ಪಟ್ಟು ಅನುಮೋದನೆಯಾಗಿರುತ್ತದೆ.
- ಸರ್ಕಾರದ ಕಂದಾಯ ಇಲಾಖೆಯ ಆದೇಶ ದಿನಾಂಕ:25.01.2023 ರನ್ವಯ ಕೃ.ಮೇ.ಯೋ. ಹಂತ-3 ರಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಒಣ ಭೂಮಿಗೆ ರೂ.20.00 ಲಕ್ಷ ಪ್ರತಿ ಎಕರೆ ಹಾಗೂ ನೀರಾವರಿ / ಬಾಗಾಯತ್ ಜಮೀನುಗಳಿಗೆ ರೂ.24.00 ಲಕ್ಷ ಪ್ರತಿ ಎಕರೆ ರಂತೆ ನಿಗದಿಪಡಿಸಲಾದ Consent Award ರನ್ವಯ ಭೂಪರಿಹಾರ ನೀಡಲು ಕ್ರಮ ವಹಿಸಲಾಗುತ್ತಿದೆ.

**ಹಂತ-3ರಡಿ ಬಾಧಿತವಾಗಲಿರುವ 20 ಗ್ರಾಮಗಳ ಪುನರ್‌ವಸತಿ ಕುರಿತು:**

- ಹಂತ-3ರ ಅನುಷ್ಠಾನಕ್ಕಾಗಿ ಬಾಧಿತವಾಗಲಿರುವ 20 ಗ್ರಾಮಗಳಿಗೆ 24 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲು ಮತ್ತು ಬಾಗಲಕೋಟೆ ಪಟ್ಟಣದ 11 ವಾರ್ಡುಗಳಿಗೆ ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲು ಯೋಜಿಸಿದ್ದು, ಇದಕ್ಕಾಗಿ 6467 ಎಕರೆ ಜಮೀನಿನ ಅವಶ್ಯಕತೆ ಇರುತ್ತದೆ. ಈ ಪೈಕಿ 3393 ಎಕರೆ

ಜಮೀನನ್ನು ಪಡಿಸಿಕೊಂಡು, ಹೊಸ ಭೂಸ್ವಾಧೀನ ಕಾಯ್ದೆ 2013ರನ್ವಯ ಜಮೀನುಗಳಿಗೆ ರೂ.559.85 ಕೋಟಿ ಭೂ ಪರಿಹಾರ ವಿತರಿಸಲಾಗಿದೆ.

➢ ಪ್ರಸ್ತುತ 24 ಪು.ಕೇ. ಗಳ ಪೈಕಿ 10 ಪು. ಕೇಂದ್ರಗಳಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ನವೆಂಬರ್-24ರ ಅಂತ್ಯದವರೆಗೆ ಒಟ್ಟು ರೂ.161.66 ಕೋಟಿ ಮೊತ್ತದ ಪ್ರಗತಿ ಸಾಧಿಸಲಾಗಿದೆ. ಬಾಕಿ ಉಳಿದ 13 ಕೇಂದ್ರಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ.

➢ ಮುಂದುವರೆದು, ಪ್ರಸ್ತುತ ಅಂಕಲಗಿ, ಉದಗಟ್ಟಿ, ಕುಂದರಗಿ, ಬಾವಲತ್ತಿ ಮತ್ತು ಮಾಚಕನೂರ (ವಜ್ರರಮಟ್ಟಿ) ಪುನರ್ವಸತಿ ಕೇಂದ್ರಗಳಲ್ಲಿ ಒಟ್ಟು ರೂ.244.67 ಕೋಟಿಗಳ ಮೊತ್ತದ 88 ಮುಂದುವರೆದ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳಿದ್ದು, ಅವುಗಳ ಪೈಕಿ ಅಂಕಲಗಿ, ಉದಗಟ್ಟಿ ಹಾಗೂ ಮಾಚಕನೂರ (ವಜ್ರರಮಟ್ಟಿ) ಪುನರ್ವಸತಿ ಕೇಂದ್ರಗಳಲ್ಲಿ ಲೇಔಟ ರಚನೆ, ರಸ್ತೆ, ಬದಿಚರಂಡಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಕುಂದರಗಿ ಹಾಗೂ ಬಾವಲತ್ತಿ ಪುನರ್ವಸತಿ ಕೇಂದ್ರಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.

ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ವಿವರವಾದ ಯೋಜನೆ ವರದಿಗೆ ಸರ್ಕಾರದ ಆದೇಶ ದಿನಾಂಕ:09.10.2017ರಲ್ಲಿ ಪರಿಷ್ಕೃತ ಮೊತ್ತ ರೂ.51,148.94 ಕೋಟಿಗಳ (2014-15ನೇ ಸಾಲಿನ ದರಪಟ್ಟಿಯಂತೆ) ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.ಸದರಿ ಮೊತ್ತದಲ್ಲಿ ಭೂಸ್ವಾಧೀನಕ್ಕಾಗಿ ರೂ. 17,627 ಕೋಟಿ ಮೊತ್ತವನ್ನು ಪ್ರಾವಿದಾನ ಇದ್ದು. ಇದರಲ್ಲಿ ನವೆಂಬರ್-24ರ ಅಂತ್ಯಕ್ಕೆ ರೂ.3,734.53 ಕೋಟಿ ಮೊತ್ತವನ್ನು ಹಾಗೂ ಪು&ಪು ಗಾಗಿ (ಬಿಟಿಡಿಎ ಒಳಗೊಂಡಂತೆ) ರೂ.12,516.17 ಕೋಟಿ ಮೊತ್ತದ ಪೈಕಿ ರೂ.3670.91 ಕೋಟಿ ವೆಚ್ಚ ಭರಿಸಲಾಗಿದೆ. ಒಟ್ಟಾರೆ ರೂ.7,405.44 ಕೋಟಿ ಮೊತ್ತವನ್ನು ವೆಚ್ಚ ಮಾಡಲಾಗಿದೆ.

ಯೋಜನೆಯ ಭೂಸ್ವಾಧೀನತೆಯನ್ನು ಎರಡು ಹಂತದ ಭೂ-ಸ್ವಾಧೀನ ಪ್ರಕ್ರಿಯೆಯನ್ನು ಕೈಬಿಟ್ಟು ಏಕಕಾಲದಲ್ಲಿ ಎಫ್‌ಆರ್.ಎಲ್ 524.256 ಮೀ ಗೆ ಎತ್ತರಿಸಿ ಪರಿಹಾರ ಧನವನ್ನು ವಿತರಿಸಬೇಕೆಂದು ಹಾಗೂ ಮುಳುಗಡೆ ಹೊಂದಲಿರುವ ಸುಮಾರು 20 ಗ್ರಾಮಗಳಿಗೆ ಪರಿಹಾರ ಧನ ವಿತರಿಸಿ ಪುನರ್ ವಸತಿ ಕೇಂದ್ರಗಳನ್ನು ನಿರ್ಮಿಸಬೇಕೆಂದು ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯ ಸಂತ್ರಸ್ತ ಕುಟುಂಬಗಳು ಹೋರಾಟವನ್ನು ಮಾಡುತ್ತಿರುವ ಹಿನ್ನೆಲೆಯಲ್ಲಿ, ದಿನಾಂಕ:16.12.2024ರಂದು ಬೆಳಗಾವಿಯ ಸುವರ್ಣ ಸೌಧದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-3ಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್‌ನಿರ್ಮಾಣದ ವಿಷಯಗಳ ಕುರಿತು ಸಭೆಯನ್ನು ಜರುಗಿಸಲಾಗಿರುತ್ತದೆ. ಸದರಿ ಸಭೆಯಲ್ಲಿ, ಬಾಗಲಕೋಟೆ-ವಿಜಯಪುರ ಜಿಲ್ಲೆ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಯ ವ್ಯಾಪ್ತಿಗೆ ಒಳಪಡುವ ಮಾನ್ಯ ಸಚಿವರುಗಳು, ಮಾನ್ಯ ಶಾಸಕರುಗಳು ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆ ಮುಳುಗಡೆ ಸಂತ್ರಸ್ತರ ಹೋರಾಟ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳೊಂದಿಗೆ ಅವರುಗಳ ವಿವಿಧ ಬೇಡಿಕೆಗಳ ಕುರಿತಾಗಿ ಸದರಿ ಸಭೆಯಲ್ಲಿ ಸುದೀರ್ಘವಾಗಿ ಈ ಕೆಳಕಂಡ ಅಂಶಗಳ ಕುರಿತು ಚರ್ಚಿಸಲಾಗಿರುತ್ತದೆ;

1) ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಲ್ಲಿ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾಗಲಿರುವ 75,563 ಎಕರೆ ಜಮೀನು ಕ್ಷೇತ್ರವನ್ನು ಈ ಹಿಂದೆ 02 ಹಂತದಲ್ಲಿ ಭೂಸ್ವಾಧೀನಕ್ಕೆ ಒಳಪಡಿಸುವ ತಿರ್ಮಾನದ ಬದಲಾಗಿ ಒಂದೇ ಹಂತದಲ್ಲಿ ಅಂದರೆ ಆರ್.ಎಲ್ 519.60 ಮೀ. ರಿಂದ 524.256 ಮೀ. ವರೆಗೆ ಭೂಸ್ವಾಧೀನಕ್ಕೆ ಒಳಪಡಿಸುವ ಬಗ್ಗೆ

2) ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಲ್ಲಿ ಭೂಸ್ವಾಧೀನಕ್ಕೆ ಒಳಪಡುವ 1.34 ಲಕ್ಷ ಎಕರೆ ಜಮೀನಿನ ಪೈಕಿ ಮೊದಲನೇ ಆದ್ಯತೆಯನ್ನು ಹಿನ್ನೀರಿನಲ್ಲಿ ಮುಳುಗಡೆ ಹೊಂದಲಿರುವ ಜಮೀನನ್ನು ಭೂಸ್ವಾಧೀನಕ್ಕೆ ಒಳಪಡಿಸುವುದು. ಪುನರ್‌ನಿರ್ಮಾಣಕ್ಕೆ ಅವಶ್ಯವಿರುವ ಜಮೀನನ್ನು 2ನೇ ಆದ್ಯತೆಯಾಗಿ ಮತ್ತು ಕಾಲುವೆ ನಿರ್ಮಾಣಕ್ಕಾಗಿ ಬೇಕಾಗುವ ಜಮೀನನ್ನು 3ನೇ ಆದ್ಯತೆಯಾಗಿ ಕೈಗೆತ್ತಿಕೊಳ್ಳುವ ಬಗ್ಗೆ

3) ಸದರಿ ಯೋಜನೆಯನ್ನು ರೈತರಿಗಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಸಹಮತದ ದರವನ್ನು ಸರ್ಕಾರಕ್ಕೆ ಹೊರೆಯಾಗದಂತೆ ನಿಗದಿಪಡಿಸುವ ನಿಟ್ಟಿನಲ್ಲಿ ದಿನಾಂಕ 25.01.2023 ರ ಸರ್ಕಾರದ ಕಂದಾಯ ಇಲಾಖೆಯ ಒಪ್ಪಂದದ ಐತೀರ್ಪು (Consent Award) ಆದೇಶದಲ್ಲಿನ ದರಗಳನ್ನು ಪರಿಷ್ಕರಿಸಿ ಜಮೀನಿನ ಮಾರುಕಟ್ಟೆ ದರ, ಮಾರ್ಗಸೂಚಿ ದರ & ಭೂಸ್ವಾಧೀನ ಕಾಯ್ದೆ–2013 ರನ್ವಯ ನ್ಯಾಯಯುತ ಪರಿಹಾರ ದರಗಳನ್ನು ನಿಗಧಿ ಪಡಿಸುವ ಕುರಿತು ಸಚಿವ ಸಂಪುಟದ ಸಭೆಯಲ್ಲಿ ನಿರ್ಧರಿಸುವ ಬಗ್ಗೆ ಹಾಗೂ ಭೂ-ಸ್ವಾಧೀನ ಪ್ರಕ್ರಿಯೆಯನ್ನು ಅನುದಾನ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ 4–5 ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ಜರುಗಿಸುವ ಬಗ್ಗೆ.

4) ಈಗಾಗಲೇ ಸಂತ್ರಸ್ತರುಗಳು ಹೆಚ್ಚಿನ ಭೂಪರಿಹಾರ ಕೋರಿ ವಿವಿಧ ನ್ಯಾಯಾಲಯಗಳಲ್ಲಿ 20 ಸಾವಿರಕ್ಕೂ ಮೇಲ್ಪಟ್ಟು ಹೂಡಿರುವ ದಾವೆಗಳ ಪ್ರಕರಣಗಳನ್ನು ಸಂತ್ರಸ್ತರುಗಳು ಹಿಂಪಡೆಯುವಂತೆ ಕೃಷ್ಣಾ ಮೇಲ್ದಂಡೆ ಯೋಜನೆಯ ವ್ಯಾಪ್ತಿಗೆ ಒಳಪಡುವ ಮಾನ್ಯ ಸಚಿವರುಗಳು, ಮಾನ್ಯ ಶಾಸಕರುಗಳು ಹಾಗೂ ಮುಳುಗಡೆ ಸಂತ್ರಸ್ತರ ಹೋರಾಟ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಇವರುಗಳು ಸಹಮತದ ಮೂಲಕ ಬಗೆಹರಿಸಲು ಕ್ರಮವಹಿಸುವ ಬಗ್ಗೆ.

**ಕೃಷ್ಣಾ ನ್ಯಾಯಾಧೀಕರಣ–II ರ ಗೆಜೆಟೆ ಅಧಿಸೂಚನೆ ಕುರಿತು;**

ದಿನಾಂಕ: 16.09.2011ರ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಲ್ಲಿ ಕೃಷ್ಣಾ ನ್ಯಾಯಾಧೀಕರಣ–2ರ ಅಂತಿಮ ತೀರ್ಪನ್ನು ಗೆಜೆಟ್ ಪ್ರಕಟಣೆ ಮಾಡದಂತೆ ಕೇಂದ್ರ ಸರ್ಕಾರಕ್ಕೆ ಆದೇಶಿಸಲಾಗಿದ್ದು, ಸದರಿ ತೀರ್ಪನ್ನು ಮಾರ್ಪಡಿಸುವಂತೆ ಕೋರಿ ರಾಜ್ಯ ಸರ್ಕಾರವು ಮಾನ್ಯ ಸರ್ವೋಚ್ಛ ನ್ಯಾಯಾಲಯಕ್ಕೆ ಮಧ್ಯಕಾಲೀನ ಅರ್ಜಿಗಳನ್ನು ಸಲ್ಲಿಸಿದೆ.

ಕೃಷ್ಣಾ ನ್ಯಾಯಾಧೀಕರಣದ ಅಂತಿಮ ತೀರ್ಪನ್ನು ಗೆಜೆಟ್ ಅಧಿಸೂಚನೆ ಹೊರಡಿಸುವ ಬಗ್ಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶವನ್ನು ಮಾರ್ಪಡಿಸಲು ಸೂಕ್ತ ಅಫಿಡವಿಟ್ ಸಲ್ಲಿಸಿ ನಂತರ ನ್ಯಾಯಾಧೀಕರಣದ ಆದೇಶವನ್ನು ಪ್ರಕಟಿಸಲು ಅಗತ್ಯ ಕ್ರಮ ಕೈಗೊಳ್ಳಲು ನಿರಂತರವಾಗಿ ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಸದರಿ ವಿಷಯದ ಕುರಿತು ರಾಜ್ಯ ಸರ್ಕಾರವು ಎಲ್ಲಾ ಆಡಳಿತಾತ್ಮಕ ಹಾಗೂ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಜಸಂಇ 120 ಡಬ್ಲ್ಯೂಬಿಎಂ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ